ಎರಡು ತುಟಿಗಳನ್ನೂ ಕೊಟ್ಟಿಲ್ಲವೇ?[5]	وَلِسَانًا وَّشَفَتَيْنِ ﴿٩﴾
10. ಮತ್ತು ಅವನಿಗೆ ಎರಡು ಸುಸ್ಪಷ್ಟ ದಾರಿಗಳನ್ನು ತೋರಿಸಿ ಕೊಡಲಿಲ್ಲವೇ?	وَهَدَيْنٰهُ النَّجْدَيْنِ ﴿١٠﴾
11. ಆದರೆ ಅವನು ದುರ್ಗಮ ಏರನ್ನು ಏರುವ ಸಾಹಸವನ್ನೇ ಮಾಡಲಿಲ್ಲ.	فَلَا اقْتَحَمَ الْعَقَبَةَ ﴿١١﴾
12. ಆ ದುರ್ಗಮ ಏರು ಏನೆಂದು ನಿಮಗೇನು ಗೊತ್ತು?	وَمَآ اَدْرٰىكَ مَا الْعَقَبَةُ ﴿١٢﴾
13. ಯಾವುದಾದರೂ ಕೊರಳನ್ನು ದಾಸ್ಯ ಬಂಧನದಿಂದ ವಿಮೋಚಿಸುವುದು-	فَكُّ رَقَبَةٍ ﴿١٣﴾
14-16. ಅಥವಾ ಹಸಿವಿನ ದಿನ, ಹಸಿದ ಆಪ್ತ ಅನಾಥನಿಗೆ ಅಥವಾ ದಿಕ್ಕೆಟ್ಟ ದರಿದ್ರನಿಗೆ ಉಣಬಡಿಸುವುದು.	اَوْ اِطْعٰمٌ فِيْ يَوْمٍ ذِيْ مَسْغَبَةٍ ﴿١٤﴾ يَّتِيْمًا ذَا مَقْرَبَةٍ ﴿١٥﴾ اَوْ مِسْكِيْنًا ذَا مَتْرَبَةٍ ﴿١٦﴾
17. ತರುವಾಯ, ಸತ್ಯವಿಶ್ವಾಸವಿರಿಸಿದ ಹಾಗೂ ಪರಸ್ಪರರಿಗೆ ಸಹನೆ ಮತ್ತು (ಸೃಷ್ಟಿಗಳ ಮೇಲೆ) ಕರುಣೆಯನ್ನು ಬೋಧಿಸಿದ ಜನರ ಸಾಲಿಗೆ ಸೇರುವುದು.	ثُمَّ كَانَ مِنَ الَّذِيْنَ اٰمَنُوْا وَتَوَاصَوْا بِالصَّبْرِ وَتَوَاصَوْا بِالْمَرْحَمَةِ ﴿١٧﴾
18. ಇವರೇ ಬಲಗಡೆಯವರು.	اُولٰٓئِكَ اَصْحٰبُ الْمَيْمَنَةِ ﴿١٨﴾
19. ಮತ್ತು ನಮ್ಮ ಸೂಕ್ತಗಳನ್ನು ತಿರಸ್ಕರಿಸಿದವರು ಎಡಗಡೆಯವರು.[6]	وَالَّذِيْنَ كَفَرُوْا بِاٰيٰتِنَا هُمْ اَصْحٰبُ الْمَشْئَمَةِ ﴿١٩﴾
20. ಅವರ ಮೇಲೆ ನರಕಾಗ್ನಿಯು ಆವರಿಸಿಕೊಂಡಿರುವುದು.	عَلَيْهِمْ نَارٌ مُّؤْصَدَةٌ ﴿٢٠﴾ ع ١٥

5. ಅರ್ಥಾತ್- ನಾವು ಜ್ಞಾನ ಮತ್ತು ವಿವೇಕದ ಮೂಲಗಳನ್ನು ನೀಡಿಲ್ಲವೇ?
6. ಬಲಗಡೆಯವರು ಮತ್ತು ಎಡಗಡೆಯವರು ಎಂಬುದರ ವಿವರಣೆಗೆ ಅಲ್ ವಾಕಿಅಃ ಅಧ್ಯಾಯದ 8,9,27 ಮತ್ತು 41ನೆಯ ಸೂಕ್ತಗಳನ್ನು ನೋಡಿರಿ.